ಸಾಕ್ಷಿಯನ್ನು ದಿಃ **04.06.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ.ವಿ.ಎಸ್. ವಕೀಲರಿಂದಃ-

ನಾನು ವಾದಿ ಬ್ಯಾಂಕಿನ ಮ್ಯಾನೇಜನರ ಆಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ಸಾಲ ಮಂಜೂರಾತಿ ಪತ್ರವನ್ನು ಹಾಜರುಪಡಿಸಿದ್ದು ನಿಪಿ-1 ಎಂದು, ಸಾಲದ ಕರಾರನ್ನು ಹಾಜರುಪಡಿಸಿದ್ದು ನಿಪಿ-2 ಎಂದು, ನಮ್ಮ ಬ್ಯಾಂಕಿಗೆ ಬರೆದುಕೊಟ್ಟ ಘೋಷಣಾ ಪತ್ರವನ್ನು ಹಾಜರುಪಡಿಸಿದ್ದು ನಿಪಿ-3 ಎಂದುಚಿ ಎರಡು ಎ.ಓ.ಡಿ.ಗಳನ್ನು ಹಾಜರುಪಡಿಸಿದ್ದು ನಿಪಿ-4 ಮತ್ತು 5 ಎಂದು, ಪ್ರತಿವಾದಿಯರ ಸಾಲದ ಖಾತೆಗೆ ಸಂಬಂಧಿಸಿದಂತೆ ಸ್ಟೇಟ್ಮೆಂಟ್ ಹಾಜರುಪಡಿಸಿದ್ದು ನಿಪಿ-6 ಎಂದು, ದಿನಾಂಕ 30.01.2015ರ ಸಾಲ ಮಂಜೂರಾತಿ ಪತ್ರವನ್ನು ಹಾಜರುಪಡಿಸಿದ್ದು ನಿಪಿ-7 ಎಂದು, ಆ ಬಗ್ಗೆ ಬರೆದುಕೊಟ್ಟ ಸಾಲದ ಕರಾರನ್ನು ಹಾಜರುಪಡಿಸಿದ್ದು ನಿಪಿ-8 ಎಂದು, ಹೈಪೋತಿಕೇಷನ್ ಕರಾರನ್ನು ನಿಪಿ-9 ಎಂದು, ಘೋಷಣಾ ಪತ್ರವನ್ನು ನಿಪಿ-10 ಎಂದು, ಮೂರು ಒಪ್ಪಿಗೆ ಪತ್ರಗಳನ್ನು ನಿಪಿ-11 ರಿಂದ 13 ಎಂದು, ಮೂರು ಎ.ಓ.ಡಿ.ಗಳನ್ನು ನಿಪಿ-14 ರಿಂದ 16 ಎಂದು, ಸದರಿ ಸಾಲದ ಖಾತೆಗೆ ಸಂಬಂಧಿಸಿದ ಸ್ಟೇಟಮೆಂಟ್ ನ್ನು ನಿಪಿ-17 ಎಂದು, ದಿನಾಂಕ 18.02.2016ರಂದು ಸಾಲ ಮಂಜೂರು ಮಾಡಿದ ಬಗ್ಗೆ ಮಂಜೂರಾತಿ ಪತ್ರವನ್ನು ನಿಪಿ-18 ಎಂದು, ಆ ಬಗ್ಗೆ ಬರೆದುಕೊಟ್ಟ ಸಾಲದ ಕರಾರನ್ನು ನಿಪಿ-19 ಎಂದು, ಅಡಮಾನ ಪತ್ರವನ್ನು ನಿಪಿ-20 ಎಂದು, ಮೂರು ಎ.ಓ.ಡಿ.ಗಳನ್ನು ನಿಪಿ-21 ರಿಂದ 23 ಎಂದು, ಎರಡು ನೊಂದಾಯಿತ ಅಡಮಾನ ಪತ್ರಗಳನ್ನು ನಿಪಿ-24 ಮತ್ತು 25 ಎಂದು, ನಮ್ಮ ವಕೀಲರ ಮೂಲಕ ನೀಡಿದ ಎರಡು ನೊಟೀಸ್‌ಗಳ ನೊಟೀಸಿನ ಕಚೇರಿ ಪ್ರತಿಗಳನ್ನು ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಹೆಚ್.ಎಲ್.ಆರ್. ವಕೀಲರಿಂದಃ

ಕಾಲಾವಕಾಶ ಕೋರಿದ್ದು, ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ

2 ನೇ ಪ್ರತಿವಾದಿ ಏಕಪಕ್ಷೀಯರಾಗಿದ್ದು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.